ದಯೆಯಿಂದ ಆಕೆಯ ದೇಹ ಹೊಸ ಸ್ವರಯಂತ್ರವನ್ನು ಸ್ವೀಕರಿಸಿತು. ಮೂರು ವಾರಗಳಲ್ಲಿ ಮನೆಗೆ ಬಂದು ಮಿತಾಲಿ ಮಾತಾಡಲಾರಂಭಿಸಿದಳು.

ಇನ್ನೊಂದು ನಾಲ್ಕೈದು ವಾರಗಳಲ್ಲಾಕೆ ಹಾಡಲೂಬಹುದಿತ್ತು. ಅವಳೇನಾದರೂ ಮೀತಾಳಂತೆ ಹಾಡಿದರೆ ಈ ಪ್ರಯೋಗ ಯಶಸ್ವಿಯಾಯಿತೆನ್ನಬಹುದಾಗಿತ್ತು. ಇದರಿಂದ ಇಡೀ ಜಗತ್ತಿನಲ್ಲೇ ಹೊಸ ಕ್ರಾಂತಿಯಾಗುವ ಸಾಧ್ಯತೆಯಿತ್ತು. ಮೀತಾಳ ಉಳಿದ ನಾಲ್ಕು ಸ್ವರಯಂತ್ರಗಳನ್ನು ಹಾಗೇ ಜೋಪಾನವಾಗಿಡಲಾಗಿತ್ತು.

ಮುಂದಿನ ವಾರದಲ್ಲಿ ಮಿತಾಲಿಯ ಸ್ವರಕಂಪನಗಳ ಗ್ರಾಫ್ ತೆಗೆಯಲಾಯಿತು. ಧ್ವನಿಯ ಪ್ರತಿಯೊಂದು ಸಣ್ಣಪುಟ್ಟ ವ್ಯತ್ಯಾಸ ಈ ಗ್ರಾಫ್‌ನಲ್ಲಿ ಸ್ಪಷ್ಟವಾಗಿ ನೋಂದಾಯಿಸಲ್ಪಟ್ಟು ಸಂಶೋಧಕನು ಅದನ್ನು ಅಭ್ಯಸಿಸಬಹುದಾಗಿತ್ತು. ಮೀತಾಳ ಹಾಡಿನ ರೆಕಾರ್ಡಿನ ಗ್ರಾಫ್ ಮತ್ತು ಮಿತಾಲಿಯ ಸ್ವರಕಂಪನಗಳ ಗ್ರಾಫ್ ಎರಡೂ ಅಚ್ಚು ಹಾಕಿದಂತೆ ಒಂದೇ ರೀತಿಯದ್ದಾಗಿತ್ತು.

ತಮ್ಮ ಸಂಶೋಧನೆಯನ್ನು ಪ್ರಸಾರ ಮಾಧ್ಯಮಗಳ ಮೂಲಕ ಜನರ ತನಕ ತಲುಪಿಸಲು ಸಾತ್ವಿಕ ಹಾಗೂ ಶುಭಂಕರ್ ಉತ್ಸುಕರಾಗಿದ್ದರು. ಆದರೆ, ಇನ್ನೂ ಸ್ವಲ್ಪ ದಿನ ಹೋಗಲಿ, ಮಿತಾಲಿಯ ದನಿಯಲ್ಲಿ ಮೀತಾಳ ಹಾಡೊಂದನ್ನು ಹಾಗೇ ರೆಕಾರ್ಡ್ ಮಾಡಿಕೊಂಡು ನೂರಕ್ಕೆ ನೂರರಷ್ಟು ಯಶಸ್ಸಿನ ಭರವಸೆಯ ಬಳಿಕವೇ ಈ ಪ್ರಯೋಗವನ್ನು ಜನರೆದುರು ತರುವುದೆಂದು ಶುಭಂಕರ್ ಸುಮ್ಮನಿದ್ದ. ಸಾತ್ವಿಕ್ ಕೂಡ ಇದಕ್ಕೆ ಒಪ್ಪಿಕೊಂಡ.

ಐದು ವರ್ಷದವಳಿದ್ದಾಗಿನಿಂದಲೇ ಮಿತಾಲಿ ಸಂಗೀತದ ತರಗತಿಗೆ ಸೇರಿಕೊಂಡಿದ್ದಳು. ಶಾಲೆಯ ಕಾಯಕ್ರಮಗಳಲ್ಲಿ ಹಾರ್ಮೋನಿಯಂನ ಸಹಾಯದಿಂದ ಸ್ವಾಗತ ಗೀತೆ ಹಾಡುವ ಹುಡುಗಿಯರೊಂದಿಗೆ ಒಬ್ಬಳಾಗಿ ಹಾಡುತ್ತಿದ್ದಳು. ಮನೆಗೆ ಬಂದವರು ಒತ್ತಾಯ ಮಾಡಿದರೆ ಭಜನೆ ಹಾಡುತ್ತಿದ್ದಳು. ಶಸ್ತ್ರಕ್ರಿಯೆಯಾದ ಮೇಲೆ ನಾಲ್ಕು ತಿಂಗಳು ವಿಶ್ರಾಂತಿ ಪಡೆದು ಆಕೆ ಹಾಡಿನ ಕ್ಲಾಸಿಗೆ ಹೊರಟಾಗ ಶುಭಂಕರ್ ಅವಳೊಂದಿಗೆ ಹೋಗಿದ್ದ. ಅವಳಿಗೆ ಹೇಳಿಕೊಟ್ಟಿದ್ದ ಭಜನೆಯೊಂದನ್ನು ಆಕೆ ತಂದೆಯೆದುರು ಹಾಡಿದಾಗ ಆಕೆಯ ಗುರುಗಳು ಆಶ್ಚರ್ಯದಿಂದ 'ಆರೋಗ್ಯ ಸರಿಯಿಲ್ಲದೆ ಮಿತಾಲಿ ನಾಲ್ಕು ತಿಂಗಳು ಕ್ಲಾಸಿಗೆ ರಜೆ ತೆಗೆದುಕೊಂಡಿದ್ದರೂ ಅವಳು ಹಾಡು ಮರೆತಿಲ್ಲ. ಅಲ್ಲದೆ ಅನಾರೋಗ್ಯದ ಸಮಯದಲ್ಲಿ ಅವಳ ಧ್ವನಿಯ ಮಟ್ಟದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ನಿಜ ಹೇಳಬೇಕೆಂದರೆ ಸಾಕಷ್ಟು ಸುಧಾರಣೆಯಾಗಿದೆ. ಅವಳ 'ಸಾ' ಸ್ವರದಲ್ಲೇ ನಾನದನ್ನು ಅರ್ಥಮಾಡಿಕೊಂಡಿದ್ದೆ. ಇನ್ನೂ ಸ್ವಲ್ಪ ಕಷ್ಟಪಟ್ಟರೆ ಮಿತಾಲಿ ಒಳ್ಳೆಯ ಗಾಯಕಿಯಾಗಬಲ್ಲಳು' ಅಂದರು.

ಶುಭಂಕರ್ ಗುರುಗಳ ಹತ್ತಿರ ಹೋಗಿ ಮೆಲ್ಲನೆ, 'ಗುರುಗಳೆ ನನಗೆ ನಿಮ್ಮಿಂದ ಒಂದು ಸಹಾಯವಾಗಬೇಕು. ಇದು ಮೀತಾ ಲೋಲಗೆಕರ್ ಹಾಡಿರುವ ಸುಂದರವಾದ ಹಾಗೂ ನನ್ನ ಅತ್ಯಂತ ಇಷ್ಟದ 'ಪ್ರಿಯತಮಾ, ನೀನಿಲ್ಲದೆ ಬದುಕಲ್ಹೇಗೆ?' ಹಾಡು.'

'ನಿಜ, ಇದು ಮೀತಾ ಹಾಡಿರುವ ತುಂಬಾ ಸುಂದರವಾದ ಗೀತೆಗಳಲ್ಲೊಂದು. ಆಕೆ ಪ್ರಿಯತಮಾ ಅನ್ನುವ ಶಬ್ದವನ್ನು ಯಾವ ಆರ್ತತೆಯಲ್ಲಿ ಹೇಳುತ್ತಾಳೆಂದರೆ, ಅದು ಪ್ರಿಯಕರನನ್ನು ಉದ್ದೇಶಿಸಿ ಹೇಳಿದ್ದೆ? ಗಂಡನನ್ನು ಉದ್ದೇಶಿಸಿ ಹೇಳಿದ್ದೆ? ಇಲ್ಲ, ಆ ಪರಮೇಶ್ವರನನ್ನು ಉದ್ದೇಶಿಸಿ ಹೇಳಿದ್ದೆ? ಎನ್ನುವುದು ಅರ್ಥವಾಗದೆ ಕೇಳುಗರು ಬೆರಗಾಗುತ್ತಾರೆ.'

'ಆ ಹಾಡನ್ನು ನನ್ನ ಮಗಳು ಮೀತಾಗೆ ಹೇಳಿಕೊಡುತ್ತೀರಾ?'

'ಅಯ್ಯೋ! ಸಾಧ್ಯ ಇಲ್ಲ, ಅದು ಬಹಳ ಕಠಿಣವಾದ ಹಾಡು.'